ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ಮಾನ್ಯ ಸದಸ್ಯರ ಕಳವಳ ಏನಿದೆ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಇದರಲ್ಲಿ ಔಷಧಿಯನ್ನು ಸರಿಯಾದ ಕಾಲಕ್ಕೆ ಒದಗಿಸಿಕೊಡಬೇಕು ಎಂಬುದಾಗಿ ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತೆ ಈಗಲಾದರೂ ಔಷಧಿಯನ್ನು ಕೊಡಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂಬುದಾಗಿ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅವರು ನನ್ನ ಹತ್ತಿರ ಬರಲಿ. ಯಾವ ಔಷಧಿಗಳು ಅವರಿಗೆ ಬೇಕು, ಎಷ್ಟು ಬೇಕು? ಯಾವ ಕಾಲಕ್ಕೆ ಬೇಕು? ಎಂಬುದನ್ನು ಅವರು ನನಗೆ ಕಾಗದ ಬರೆದರೂ ಚಿಂತೆಯಿಲ್ಲ. ಅಥವಾ ಸ್ವತಃ ಬಂದು ತಿಳಿಸಿದರೂ ನಾನು ಒದಗಿಸುವುದಕ್ಕೆ ಸೂಕ್ತ ಏರ್ಪಾಡು ಮಾಡುತ್ತೇನೆ. ಆದರೆ ಒಂದು ತಿಂಗಳ ಮುಂಚೆ ತಿಳಿಸಬೇಕು. ಈ ರೋಗಗಳಲ್ಲಿ ಎರಡು ವಿಧಾನಗಳು ಇವೆ. ಅದರಲ್ಲಿ ಒಂದು ಕಂಬಳಿ ಹುಳುವಿನ ರೋಗ ಮತ್ತೊಂದು ಭಂಡಾರ ರೋಗ, ಜಾಸ್ತಿ ಬರತಕ್ಕಂತ ರೋಗ ಕಂಬಳಿ ಹುಳುವಿನ ರೋಗ. ಇದನ್ನು ತಡೆಯುವುದಕ್ಕೆ ಸಾಧ್ಯ ಇದೆ. ಮತ್ತೆ ಭಂಡಾರ ರೋಗಕ್ಕೆ ಔಷಧಿಯನ್ನು ಕಂಡುಹಿಡಿಯತಕ್ಕಂತಹ ಮತ್ತು ಆ ರೋಗವನ್ನು ಹತೋಟಿಗೆ ತರತಕ್ಕಂತಹ ಒಂದು ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರ ಅಭಿಪ್ರಾಯ ಕಂಬಳಿ ಹುಳುವಿನ ರೋಗದ ಬಗ್ಗೆ ಇರಬಹುದು. ಅದನ್ನು ಸಂಪೂರ್ಣವಾಗಿ ತಡೆಯುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಔಷಧಗಳನ್ನು ಸಿಂಪಡಿಸುವುದಕ್ಕೆ ರೈತರಿಗೆ ಸಾಲದ ರೂಪದಲ್ಲಿ ಕೊಡತಕ್ಕಂತಹ ಹಣವನ್ನು ತಪ್ಪಿಸಿ, ಅದನ್ನು ಕ್ರಯ ತೆಗೆದುಕೊಳ್ಳದೇ ಒದಗಿಸಿಕೊಡುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಮುಂಪತ್ತಾಗಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಈ ರೋಗ ತಗುಲಿರತಕ್ಕಂತಹದ್ದು ಚಿತ್ರದುರ್ಗ ಜಿಲ್ಲೆಯ ಒಂದೇ ಅಲ್ಲ. ಅದೇ ರೀತಿ ಬೆಳಗಾಂ, ರಾಯಚೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲೂ ಈ ರೋಗ ಇದೆ. ಆದುದರಿಂದ ಇದನ್ನು ಮುಂಪತ್ತಾಗಿ ಕೊಡುವುದಕ್ಕಾಗುವುದಿಲ್ಲ. ನಾವು ಈ ಹಣವನ್ನು ಸಹಕಾರಿ ಸಂಘಗಳ ಮೂಲಕ ಕೊಡುತ್ತೇವೆ. ಅವರಿಗೆ ಗೊಬ್ಬರವನ್ನು ಕೊಡುತ್ತಿದ್ದೇವೆ. ರೋಗಕ್ಕೆ ಔಷಧಿಯನ್ನು ಸಿಂಪಡಿಸುವುದಕ್ಕೆ ೫೦ ಪರ್ಸೆಂಟ್, ೬೦ ಪರ್ಸೆಂಟ್ ಮತ್ತು ೭೦ ಪರ್ಸೆಂಟ್‌ವರೆಗೂ ಹಣ ಕೊಡುತ್ತೇವೆ. ಮತ್ತೆ ರೈತರೂ ಕೂಡ ಅಂತಹ ವಿಚಾರದಲ್ಲಿ ಎಚ್ಚೆತ್ತುಕೊಳ್ಳಬೇಕು. ಅವರು ಇದಕ್ಕೆ ಮೊದಲೇ ತಯಾರಾಗಿರಬೇಕು. ರೋಗ ಬೆಳೆಗೆ ಬಂದ ಮೇಲೆ ಔಷಧಿಯನ್ನು ಸಿಂಪಡಿಸಿದರೆ ಹೇಗೆ ಆಗುತ್ತದೆ,....?

Land for distribution of sites to Weaker Section People in T. Narasipur Taluk

576 SRI H. GANGADHARAN (Krishnaraj).—Will the Minister for Housing and Urban Development be pleased to state.—

(a) whether the land bearing S. No. 193, 192 B, of Monasikya-thanahalli of T. Narasipur Taluk, Bannur Hobli, was acquired for distribution of sites to the weaker section of the people Kempegowda-nakoppal ;

(b) the extent of land acquired and how many sites are distributed to the weaker section ;

(c) the number of Harijans who are provided with, of them, how many belongs to Scheduled Tribes ;

(d) whether it has come to the notice of Government that some influential persons are trying to disturb the occupants by bringing pressure on the Government authorities ;

(e) whether there is any necessity to disturb the occupants?

SRI DHARM SINGH (Minister for Housing and Urban Development).—

(a) Lands is S No 193 (1-26) and 192/1 A (0-39) has been acquired. No. land in S.No. 192-B has been acquired.

(b) 2 Acres 15 Guntas 42 Sites.

(c) 5 Scheduled Castes 1 Scheduled Tribes.

(d) No

(e) No

ಶ್ರೀ ಎಚ್. ಗಂಗಾಧರಪ್ಪ.—ಕೆಂಪೇಗೌಡನ ಕೊಪ್ಪಲಿನ ಜನರ ನಿವೇಶನದ ಪುನರ್ವಸತಿಗಾಗಿ ೨-೦೫ ಎಕರೆಯನ್ನು ಏನು ಸ್ವಾಧೀನ ಮಾಡಿಕೊಂಡಿದ್ದೀರಿ, ಅದರಲ್ಲಿ ಈಗಾಗಲೇ ೪೨ ನಿವೇಶಗಳನ್ನು ಕೊಟ್ಟಿದ್ದೀರಿ. ಈಗ ೨-೦೫ ಎಕರೆ ಪ್ರದೇಶದಲ್ಲಿ ಒಟ್ಟು ೪೨ ನಿವೇಶನಗಳನ್ನು ಮಾತ್ರ ಮಾಡಿದ್ದಿರೋ? ಅಥವಾ ಇನ್ನೂ ನಿವೇಶನ ಕೊಡುವುದು ಬಾಕಿ ಉಳಿದಿದೆಯೇ?

ಶ್ರೀ ಧರ್ಮಸಿಂಗ್.—೨-೦೫ ಎಕರೆ ಜಮೀನಿನಲ್ಲಿ ಒಟ್ಟು ೫೪ ಸೈಟುಗಳನ್ನು ಮಾಡಿದ್ದೇವೆ. ಅವುಗಳಲ್ಲಿ ೪೨ ಸೈಟುಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಇನ್ನೂ ೧೨ ಸೈಟುಗಳು ಉಳಿದಿವೆ.

ಶ್ರೀ ಎಚ್. ಗಂಗಾಧರಪ್ಪ.—ಇನ್ನುಳಿದವುಗಳನ್ನು ಶ್ರೀಮಂತರಿಗೊಸ್ಕರ ಕೊಡುವುದಕ್ಕಾಗಿ ಕೋಟ್ಯಾಂತರ ರೂಪಾಯಿಗಳ ಒಂದು ಮಾಸ್ಟರ್ ಪ್ಲಾನನ್ನು ಮಾಡಿದ್ದು ತಮ್ಮ ಗಮನಕ್ಕೆ ಬಂದಿದೆಯೇ ಇದು ಈಗ ಯಾವ ಹಂತದಲ್ಲಿವೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಧರ್ಮಸಿಂಗ್.—ಮಾಸ್ಟರ್ ಪ್ಲಾನ್ ಮಾಡಿನ್ನು ನಿಜ. ಆದರೆ ಆ ಮಾಸ್ಟರ್ ಪ್ಲಾನ್‌ನ್ನು ಶ್ರೀಮಂತರಿಗೊಸ್ಕರ ಮಾಡಿದ್ದಲ್ಲ. ಅದು ಲೋ ಲೆಯಿಂಗ್ ಏರಿಯಾ ಆದುದರಿಂದ ಮಾಸ್ಟರ್ ಪ್ಲಾನನ್ನು ಮಾಡಿದ್ದಾರೆ. ಇದರ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಒಂದು ನೋಟಿಫಿಕೇಷನ್‌ನ್ನು ಕೂಡ ಹೊರಡಿಸಿದ್ದಾರೆ. ಆದಿ ಸ್ವಲ್ಪ ತೊಂದರೆಯಾಗಿದೆ. ಇನ್ನುಳಿದ ಸೈಟುಗಳನ್ನು ಯಾವರೀತಿ ವಿತರಣೆ ಮಾಡಬೇಕೆಂಬುದರ ಬಗ್ಗೆ ನಾನು ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ ಅದು ಲೋ ಲೆಯಿಂಗ್ ಏರಿಯಾ ಆದುದರಿಂದ ಅಲ್ಲಿ ಮಾಸ್ಟರ್ ಪ್ಲಾನ್‌ನ್ನು ಮಾಡಿದ್ದಾರೆ.

ಶ್ರೀ ಎಚ್. ಗಂಗಾಧರಪ್ಪ.—ಆ ಮಾಸ್ಟರ್ ಪ್ಲಾನ್ ತಯಾರು ಮಾಡುವಾಗ ಅಂದಾಜು ಎಷ್ಟಾಗಬಹುದು? ಈಗ ಅಂದಾಜು ಎಷ್ಟಾಗಿದೆ? ಅಲ್ಲಿ ಬಡವಳಿದ್ದು, ಜನ ಬಡಜನರಿದ್ದಾರೆ ಹರಿಜನರು ಇದ್ದಾರೆ, ಅಲ್ಲಿ ಜನತಾ ಮನೆಗಳನ್ನು ಕಟ್ಟಿಸಿಕೊಡುವುದಕ್ಕಾಗುವುದಿಲ್ಲವೆ? ಅದನ್ನು ಬಿಟ್ಟು ಈ ರೀತಿ ಮಾಸ್ಟರ್ ಪ್ಲಾನನ್ನು ತಯಾರು ಮಾಡುವುದಕ್ಕೆ ಲಕ್ಷಾಂತರ ರೂಪಾಯಿಗಳು ವಿಚಾರಗಳಾಗಿವೆ. ಅದನ್ನು ಖರ್ಚು ಮಾಡುವ ಅವಶ್ಯಕತೆಯಾದರೂ ಏನಿತ್ತು?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಇದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಬೇಕಾದಂತಹ ಉತ್ತರವನ್ನು ಏನಿಸಲಾಗುವುದು. ಈ ಮಾಸ್ಟರ್ ಪ್ಲಾನನ್ನು ೧೯೭೯ರಲ್ಲಿ ತಯಾರು ಮಾಡಿದ್ದು. ಎಷ್ಟು ವಿಚಾರಗಳಿವೆ ಎಂಬುದರ ಬಗ್ಗೆ ಬೇಕಾದರೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡುತ್ತೇನೆ.

Villages without Primary Schools in Karnataka State

656 SRI B. A. MOHIDEEN (Bantwal).—Will the Minister for Education be pleased to state.—

(a) how many villages are there without primary schools in Karnatka State;

(b) the amount provided during 1977-78, 1978-79, 1979-80 and 1980-81 for construction of Primary School buildings?